# ಪದ್ದುವಿನ ಫಜೀತಿ

■ ಗುಂಡುರಾವ್ ದೇಸಾಯಿ, ಮಸ್ಕಿ
ಕಲೆ: ಸಂತೋಷ್ ಸಸಿಹಿತ್ಲು



ಪದ್ದು ಮೊಬೈಲ್‌ಗೆ ಕಾಲ್ ಬಂತು. ಹೊಸ ನಂಬರ್ ಅದಾಗಿತ್ತು. ರಿಸೀವ್ ಮಾಡಿದಾಗ ‘ಏನು ಬ್ಯುಸಿನಾ...?’ ಎನ್ನುವ ವೈಯಾರದ ಧ್ವನಿ ಕೇಳಿ ಪುಳುಕಿತನಾದ. ಪರಿಚಿತ ಧ್ವನಿ ಎನಿಸಿತು.

’ಓ...ಎಸ್ ..ಎಸ್... ಅದೆ ಧ್ವನಿ. ಇಪ್ಪತ್ತು ವರ್ಷಗಳಾದವೇನೊ....? ಕಾಲೇಜಿನಲ್ಲಿ ಆ ಧ್ವನಿಗಾಗಿ ಎಷ್ಟೆಲ್ಲ ತಪಸ್ಸು ಮಾಡತಿದ್ವಿ... ಅದೆ ನಾನು ಆ ಧ್ವನಿ ಬದುಕಿನಲ್ಲಿ ಕೇಳುತ್ತೇನೊ ಇಲ್ವಾ ಅಂಕೊಂಡಿದ್ದೆ... ನಿಜಾನಾ...’ ಎಂದು ಚಿವಟಿಕೊಂಡು ವಾಸ್ತವವೆಂದು ಖಾತ್ರಿಪಡಿಸಿಕೊಂಡ.

‘ಹಲೋ... ಯಾರಂತ ಗೊತ್ತಾಯ್ತಾ...? ಬ್ಯುಜಿನಾ... ಹಾಗಿದ್ರೆ ಆಮೇಲೆ ಮಾಡ್ತಿನಿ’ ಅಂದಿತು ಆ ಧ್ವನಿ ಮತ್ತೆ ವೈಯಾರದಿಂದ. ಎರಡು ದಶಕದ ನಂತರವೂ ಅದೇ ಮಧುರ ಧ್ವನಿ. ನನ್ನ ಭಾಗ್ಯ ಇವತ್ತು. ಆನ್‌ಲೈನ್ ಮಿಟಿಂಗ್ ನಡಿತಿದ್ರು ಹೊರಬಂದು...

‘ನೀವು, ನೀವು... ಮೀನಾ ತಾನೆ...?’ ಎಂದ.

‘ಹೊ...ಪದ್ದು, ಅಂತೂ ಗುರುತು ಹಿಡಿದ್ರಿ. ಸೋ... ನೈಸ್’ ಎಂದಿತು ಆ ಧ್ವನಿ.

‘ಹೇಗೆ ಮರೆಯೋಕೆ ಆಗುತ್ತೆ ಮೇಡಂ. ನಿಮ್ಮೊಂದಿಗಿನ ಆತ್ಮೀಯ ಸ್ನೇಹವನ್ನು ‘ಹೋ... ನಾಟಿ... ಮೇಡಂ ಅಂತಿರಾ ಪದ್ದು. ಬಿಟ್ಹಾಕಿ, ಕಾಲ ಮಿ ಯಾಜ್ ಎ, ಮೀನಾ ಓನ್ಲಿ, ಸರಿ. ಹೌದು ನನ್ನ ನಂಬರ್ ಹೇಗೆ ಸಿಕ್ಕಿತು?’ ಎಂದ ಪದ್ದು.

‘ಹೇಗೋ ಸಿಕ್ಕಿತಪಾ, ಹೇಳಿ ಎಲ್ಲಿ ಇರೋದು?’ ಎಂದು ಕೇಳುತ್ತ ಕೆಲಸ, ಮನೆ, ಮನೆಯವರು, ಮಕ್ಕಳ ಬಗ್ಗೆ ಮಾತು ನಡೆಯಿತು. ಪದ್ದು ಎಲ್ಲವನ್ನು ಹೇಳಿ ಮೀನಾ ಬಗ್ಗೆನೂ ಕೇಳಿ ‘ಹೋ ಸೋ ಲಕ್ಕಿ ಮೇಡಂ ನೀವು. ಬಾಂಬೆಯಲ್ಲಿ ಸ್ವಂತ ಮನೆ, ಸಾಫ್ಟ್‌ವೇರ್ ಪತಿ. ಬೈದಿ ಬೈ ನಾನು ಬೆಂಗಳೂರಲ್ಲಿ ಇರೋದು. ಬಂದಾಗ ಬನ್ನಿ’ ಎಂದ. ಅಷ್ಟರಲ್ಲಿ

‘ಯಾರ್‍ರಿ ಅದು? ಯಾರ ಜೊತೆ ಮಾತಾಡತಾ ಇರೋದು...’ ಪಮ್ಮಿಯ ಧ್ವನಿ ಬಂತು ಒಳಗಿನಿಂದ. ‘ಅದೆ ನನ್ನ ಕ್ಲಾಸಮೇಟ್ ಮೀನಾ ಅಂತ ಹೇಳತಿದ್ದೆನಲ್ಲ... ಅವರು ಮಾಡಿದ್ದು...’

‘ಓ ಮನೆಯವರು ಇದ್ದಾರ, ಕೊಡಿ ಕೊಡಿ ಮಾತಾಡುವೆ’ ಎಂದಳು ಮೀನಾ.

ಭಯದಿಂದ ಕೊಟ್ಟ ಪದ್ದು. ‘ಹೇಳಿ ಮೇಡಂ ಹೇಗಿದ್ದಿರಿ? ನಾನು ನಿಮ್ಮ ಮನೆಯವರ ಕಾಲೇಜ್‌ಮೇಟ್. ಯೂ ಆರ್ ಲಕ್ಕಿ... ಒಳ್ಳೆ ಪರಸನ್ ನಿಮಗೆ ಸಿಕ್ಕಿದ್ದು’ ಎಂದು ಏನೆಲ್ಲಾ ಹೇಳತಿದ್ರೆ, ಪಮ್ಮಿಯ ಮುಖದಲ್ಲಿ ಬೇರೆ ಆಗತಿತ್ತು. ಪಮ್ಮಿನೂ ಕೂಲಾಗಿ ಮಾತನಾಡಿ.

‘ಬೆಂಗಳೂರಿಗೆ ಬಂದಾಗ ಬನ್ನಿ’ ಎಂದಳು.

‘ನಿಮ್ಮ ಮಾತು ಕೇಳತಾ ಇದ್ರೆ ನೀವು ಬಹಳ ಒಳ್ಳೆಯವರಾಗಿ ಕಾಣ್ತೇರಿ. ಖಂಡಿತ ಬರತೀನಿ’ ಎಂದು ಮಾತು ಮುಗಿಸಿದಳು.

‘ಬರತಾಳಂತೆ ಬರತಾಳೆ. ಬಿನ್ನಾಣಗಿತ್ತಿ. ಇಪ್ಪತ್ತೈದು ವರ್ಷ ಆದ ಮೇಲೆ ಯಾಕ ನೆನಪಾಯ್ತೋ ಈ ಮೂದೇವಿಗೆ. ನನ್ನ ಗಂಡನ ಬೇಕಾಗಿತ್ತಾ?’ ಅಂತ ಕೈ ಕೈ ಹಿಚುಕೊಳ್ಳಾಕತಿದ್ಲು. ಪದ್ದು ಆಗಾಗಾ ಸಿಟ್ಟು ಬಂದಾಗ ಮೀನಾಳ ಬಗ್ಗೆ ಮಾತಾಡುತ್ತಿದ್ದ. ಅವಳು ಕಣ್ಣು, ಜಡೆ, ತುಟಿ, ನಡೆ ಹಾಗೆ ಹೀಗೆ... ಅಂತ. ಈಗ ಹೇಗೆ ಆಗಲಿಕ್ಕಿಲ್ಲ! ಅವಳದೇನೆ ಫೋನ್ ಬಂದಾಗ. ಸವತಿ ಮತ್ಸರ ಸಹಜವಾಗಿ ಕೆರಳಿತು. ಮುಖ ಕೆಂಪಾಯಿತು.

ಮೀನಾಳೊಂದಿಗೆ ಮಾತು ಮುಗಿಸಿ ಬಂದ ಪದ್ದು ‘ಯಾಕೆ..? ಹಾಂಗ ದಿಢೀರನೆ ಚೇಂಜ್ ಆದಿ’ ಎಂದ.

‘ಆಗದೆ ಏನೋ... ಸಿಕ್ಕಳಲ್ಲ ಆ ಮೂದೇವಿ. ಮುಗಿತು ನನ್ನ ಕಥೆ’.

‘ಅಯ್ಯೊ... ನಾನು ಆಕೆ ಬಗ್ಗೆ ಹೇಳತಿದ್ದ ಎಲ್ಲಾ ಮಾತುಗಳೂ ಸುಳ್ಳು. ಸುಮ್ಮನೆ ನಿನ್ನ ರೇಗಸೋಕೆ ಹಾಗೆ ಮಾಡತಿದ್ದೆ. ಆಕೆ ಕಾಲೇಜಿನಲ್ಲಿ ನಮ್ಮ ಕಡೆ ತಿರುಗಿ ಸಹಿತ ನೋಡತಿರಲಿಲ್ಲ...’